"ಬೇಡ, ಆಗ್ತಾ ಇಲ್ಲ. ನಡೆಯೊಕ್ಕೆ ಆಗ್ತಾ ಇಲ್ಲ. ಯಾಕೊ ಭಯಂಕರ ತಲೆನೋವು."

"ಕಡಲಿನ ಗಾಳಿ ಸೇವಿಸಿದ್ರೆ ತಲೆನೋವು ಕೂಡಲೆ ವಾಸಿ ಆಗಿಬಿಡತ್ತೆ."

"ಆದರೆ, ನನಗ್ಯಾಕೊ ಹೆದರಿಕೆಯಾಗತ್ತೆ."

"ಯಾಕೆ ಹೆದರ್ತಿಯಾ?..."

"ಕಾಗೆಗಳ ಬಗ್ಗೆ!..."

ಆತ ಜೋರಾಗಿ ನಕ್ಕ.

ಸಂಜೆಯ ಬಿಸಿಲಿಗೆ ದಣಿದಿದ್ದ ತೆಂಗಿನ ಗರಿಗಳನ್ನು ಹುಡುಕಿಕೊಂಡು ಅವು ಭಯಂಕರ ರೆಕ್ಕೆಬಡಿತದೊಂದಿಗೆ ಬರುತ್ತಿದ್ದವು.

ಒಳಗಿಟ್ಟ ಕಾಲನ್ನು ತೆಗೆದು ಹೊರಗಿಟ್ಟಳು.

ಗೇಟಿಗೆ ಬೀಗ ಹಾಕಿದಳು.

ರಸ್ತೆಯಿಂದ ಪಾದಗಳು ಹೂತು ಹೋಗುವ ಮರಳಿನ ದಾರಿಗಿಳಿಯುವಾಗ ಸಾವಿರಾರು ಕಾಗೆಗಳ ಕಿರುಚುವಿಕೆಯನ್ನು ಅವಳು ಎದುರುಗೊಂಡಳು. ತೀರದಲ್ಲಿ ಹಿಡಿದಿಟ್ಟ, ಬಿಸಿಲಿನಲ್ಲಿ ಬೇಯುತ್ತಿರುವ ಮೀನುಗಳ ಭಯಂಕರ ದುರ್ಗಂಧ.

ಗಂಡ ಹೇಳಿದ:

"ಈ ಕಡಲಿನ ಗಾಳಿ ಸೇವಿಸೋದಿಕ್ಕೆ ತುಂಬಾನೆ ಅದೃಷ್ಟ ಮಾಡಿರಬೇಕು!"

ಈ ಕಡಲ ತೀರದಲ್ಲಿ ಕುಳಿತುಕೊಳ್ಳುವುದಕ್ಕಾಗಿಯೇ ಮೈಲಿಗಟ್ಟಲೆ ದೂರಗಳಿಂದ ನಗರಕ್ಕೆ ಬರುವ ವಿದೇಶಿಯರ ಬಗ್ಗೆ ಆತ ಮಾತನಾಡಿದ.

ಕಡಲತೀರದಲ್ಲಿ ಮನುಷ್ಯರು ಕಟ್ಟಿದ ಮರಳಿನ ಅರಮನೆಗಳು ಒಡೆದು ಧ್ವಂಸಗೊಂಡಿದ್ದವು. ಮಕ್ಕಳ ಬೆರಳತುದಿಗಳಲ್ಲಿ ಒದ್ದೆಯಾದ ಮರಳು ಅಂಟಿಕೊಂಡಿದ್ದವು. ಸಂಜೆಯ ಬಿಸಿಲು ಆ ಬೆರಳುಗಳನ್ನು ನೆಕ್ಕುತ್ತಾ ಒರೆಸಿತು. ಅನಂತವಾದ ದುಃಖಗಳಂತೆ ತೆರೆಗಳ ಸರಣಿಗಳು ದುಂಡಾಕೃತಿ ಪಡೆದುಕೊಂಡವು.

ತಂಪಾದ ಗಾಳಿಯ ಸ್ಪರ್ಶನದಲ್ಲಿ ಮುಳುಗಿದ್ದ ಗಂಡ ಹೇಳಿದ:

"ದಿನವೂ ನಾವು ಈ ಕಡಲಿನ ತೀರದಲ್ಲಿದ್ದುಕೊಂಡು ಗಾಳಿಯನ್ನು ಸೇವಿಸಬೇಕು."

"ಕಡಲು ಎಂದೆಂದಿಗೂ ಇದ್ದೇ ಇರುತ್ತದೆ. ಆದರೆ, ನಾವು ಇರುತ್ತೇವೆಯೇ?..."

"ಎಂದೆಂದಿಗೂ ಅಲ್ಲದಿದ್ದರೂ ಇರುವಷ್ಟು ಕಾಲ! ನೋಡು ಈ ಕಡಲಿನ ಗಾಳಿ ಆರೋಗ್ಯಕ್ಕೆ ಬಹಳ ಒಳ್ಳೆಯದು!"

ಕಡಲಿನ ಗಾಳಿ, ಕರಿಮಸಿ, ಹೊಗೆ ಯಾವುದೂ ಇಲ್ಲದ ಗ್ಯಾಸ್ ಒಲೆಯಲ್ಲಿ ಬೇಯಿಸಿದ ಒಳ್ಳೆಯ ಆಹಾರ, ಶುಚಿಯಾದ ಮನೆ, ಬಿಸಿಲು, ಮಳೆ, ಮಂಜು... ಇದೆಲ್ಲವೂ ಆರೋಗ್ಯಕ್ಕೆ ಒಳ್ಳೆಯದೆ!

ಆದರೆ, ಈ ಕಾಗೆಗಳ ಕಿರುಚಾಟವೋ? ಅವಳದನ್ನು ಹೇಳಲಿಲ್ಲ. ನಗುವಿಗೆ ಕಾರಣವಾಗಲು ಅವಳು ಇಚ್ಛಿಸಲಿಲ್ಲ.

"ನೋಡು, ನಾವು ವಾಸ ಮಾಡುವ ಮನೆಯನ್ನು ಖರೀದಿ ಮಾಡಿದರೆ ಹೇಗೆ ಎಂದು ನಾನು ಆಲೋಚನೆ ಮಾಡ್ತಾ ಇದೀನಿ."

ಒಂದು ಕೆಟ್ಟ ಕನಸು ಕಂಡಂತಾಗಿ ಅವಳೊಮ್ಮೆ ಬೆಚ್ಚಿದಳು.

"ಈ ಕಡಲತೀರಕ್ಕೆ ನಾನು ಬರೋದಿಲ್ಲ. ತೆರೆಗಳ ಹೊಡೆತದ ಬಿಕ್ಕಳಿಕೆಯನ್ನು ಕೇಳಲು ನನಗಿಷ್ಟವಿಲ್ಲ."

ಬಹಳ ನಡೆದಿದ್ದ ಆಯಾಸದಲ್ಲಿ ಅಂದಿನ ರಾತ್ರಿ ಒಳ್ಳೆ ನಿದ್ರೆ ಬರಬಹುದೆಂದು ಅವಳು ಆಶಿಸಿದಳು.